ಐದು ವರ್ಷಗಳಿಗಿಂತ ಹೆಚ್ಚು ಕಾಲ ಒಂದೇ ಕಡೆ ಇರುವ ನೌಕರರನ್ನು ಹಾಗೂ ಅಧಿಕಾರಿಗಳನ್ನು ವರ್ಗಾವಣೆ ಮಾಡುವ ಬಗ್ಗೆ,

೪೮೬. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಅಗ್ನಿಶಾಮಕ ದಳದಲ್ಲಿರುವ ನೌಕರರ ಹಾಗೂ ಅಧಿಕಾರಿಗಳ ಸಂಖ್ಯೆ ಎಷ್ಟು.

ಆ) ಬೆಂಗಳೂರು ನಗರದಲ್ಲಿರುವ ಅಗ್ನಿಶಾಮಕ ದಳಗಳಲ್ಲಿನ ಅಧಿಕಾರಿಗಳು ಹಾಗೂ ನೌಕರರು ಕಳೆದ ೫ ವರ್ಷಗಳಿಗಿಂತ ಹೆಚ್ಚು ವರ್ಷಗಳ ಕಾಲ ಒಂದೇ ಕಡೆ ಸೇವೆ ಸಲ್ಲಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

ಇ) ಸದರೀ ಅಧಿಕಾರಿಗಳು, ನೌಕರರು ಒಂದೇ ಕಡೆ ಸೇವೆ ಸಲ್ಲಿಸಲು, ಸಂಬಂಧಪಟ್ಟ ಅಧಿಕಾರಿಗಳು ಅವರಿಂದ ಹಣ ಪಡೆದು ಹಾಗೂ ಮುಂದುವರಿಸುತ್ತಿರುವುದೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಈ) ಹಾಗಿದ್ದಲ್ಲಿ ಅಧಿಕಾರಿಗಳ ನೌಕರ ವರ್ಗಾವಣೆಕೆಯ ಸರ್ಕಾರಿ ನಿಯಮಗಳೇನು.

ಉ) ಹಾಗಿದ್ದಲ್ಲಿ ೫ ವರ್ಷಗಳಿಗಿಂತ ಹೆಚ್ಚು ಕಾಲ ಒಂದೇ ಕಡೆ ಇರುವವರನ್ನು ಕೂಡಲೇ ವರ್ಗಾವಣೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು).—

ಅ) ಅಧಿಕಾರಿಗಳು (ಗ್ರೂಪ್–ಸಿ ಕೂಡ ಸೇರಿ—೧೧೨
ನೌಕರರು —೧೪೫೯

ಆ) ಹೌದು ಸ್ವಾಮಿ.

ಇ) ಇಲ್ಲ ಸ್ವಾಮಿ.

ಈ) ಸರ್ಕಾರಿ ನೌಕರರ ವರ್ಗಾವಣೆಯ ಬಗ್ಗೆ ರೂಪಿಸಿರುವ ನೀತಿಯನ್ನು ಪಾಲಿಸಲಾಗುತ್ತಿದೆ.

ಉ) ನೇರ ನೇಮಕಾತಿ ಹುದ್ದೆಗಳನ್ನು ತುಂಬಿದ ಕೂಡಲೇ ಒಂದೇ ಸ್ಥಳದಲ್ಲಿ ೫ ವರ್ಷಗಳ ಕಾಲಕ್ಕಿಂತ ಹೆಚ್ಚು ಕಾಲ ಇರುವ ಅಧಿಕಾರಿಗಳನ್ನು ಮತ್ತು ನೌಕರರನ್ನು ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಹಸಿರು ಕಾರ್ಡುದಾರರಿಗೆ ಸರಿಯಾಗಿ ಆಹಾರಧಾನ್ಯ ನೀಡದೇ ಇರುವ ಬಗ್ಗೆ.

೪೮೭. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿನ ಗ್ರಾಮದ ಹಸಿರು ಕಾರ್ಡುದಾರರಿಗೆ ಸರಿಯಾಗಿ ಪಡಿತರ ವಿತರಣೆ ಮಾಡದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕಾಳಸಂತೆಯಲ್ಲಿ ವ್ಯಾಪಾರ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಸದರಿ ಅಕ್ಕಿ, ಸಕ್ಕರೆ ತಂದು ಹಂಚುವವರು ಹಿಂದೆ ಕೆ. ಎಸ್. ಆರ್. ಟಿ. ಸಿಯಲ್ಲಿ ನಿರ್ವಾಹಕರಾಗಿ ಸೇವೆಸಲ್ಲಿಸುತ್ತಿರುವಾಗ ಹಣದ ಅವ್ಯವಹಾರದಲ್ಲಿ ಸಿಕ್ಕು ಕೆಲಸ ಕಳೆದುಕೊಂಡಿದ್ದು ಅಂತಹವರಿಗೆ ಮತ್ತೆ ಸರ್ಕಾರದವರು ಸದರಿ ಕೆಲಸ ನಿರ್ವಹಿಸಲು ನೇಮಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ ಇವರನ್ನು ಬದಲಾಯಿಸಿ ಹಾಗೂ ಕೂಡಲೇ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಮತ್ತು ಸರಿಯಾದ ರೀತಿಯಲ್ಲಿ ಆಹಾರ ಧಾನ್ಯ ಹಂಚಲು ಕೂಡಲೇ ವ್ಯವಸ್ಥೆ ಮಾಡಲಾಗುವುದೆ ?